# ವಿಷಗಾಳಿ ತಿಳಿಗೊಳಿಸುವ ಸಸ್ಯಗಳು



ಮನೆಯ ಹೊರಗೆ ಹಿತ್ತಲಿನಲ್ಲಿ ಬೆಳೆಯುವ ಕೆಲವು ಸಸ್ಯಗಳನ್ನು ಅಲಂಕಾರಕ್ಕಾಗಿ ಮನೆಯ ಒಳಗೂ ಕುಂಡಗಳಲ್ಲಿ ಬೆಳೆಸಬಹುದು. ಮನೆಯ ಒಳಾಂಗಣವನ್ನು ಅಂದಗೊಳಿಸುವ ಕೆಲವು ಸಸ್ಯಗಳು ಸೂಸುವ ಗಾಳಿ ಆರೋಗ್ಯಕ್ಕೂ ಒಳ್ಳೆಯದು.

■ ರೂಪಾ ಕೆ.ಎಂ.



ಮನೆಯೆಂದ ಮೇಲೆ ಅದರ ಅಂದ ಚಂದಕ್ಕೆ ಆದ್ಯತೆ ನೀಡಿದಷ್ಟು ಒಳ್ಳೆಯದೇ. ಹಾಗೆಂದೂ ಅದಷ್ಟೆ ಸಾಕೇ? ಎಂದರೆ ಇಲ್ಲ. ಮನೆಯ ಹೊರಗಡೆ ಉಸಿರಾಡುವ ಗಾಳಿ ಕಲುಷಿತಗೊಳ್ಳುತ್ತಿದೆ. ಹಾಗಾಗಿ ಮನೆಯ ಒಳಗೂ ಶುದ್ಧ ಗಾಳಿಯನ್ನು ಉಂಟು ಮಾಡಬಲ್ಲ ಸಸ್ಯಗಳಿದ್ದರೆ ಒಳ್ಳೆಯದೇ ಅಲ್ಲವೆ.

ಮೇಲ್ನೋಟಕ್ಕೆ ಇವುಗಳು ಆಲಂಕಾರಿಕ ಸಸ್ಯಗಳಂತೆ ಕಂಡರೂ ಮಲಿನಕಾರಕ ಗಾಳಿಯನ್ನ ಶುದ್ಧ ಮಾಡುತ್ತವೆ. ಮನೆಯ ಒಂದು ಬದಿಯಲ್ಲಿ ಹೂಕುಂಡದೊಳಗೆ ನಳನಳಿಸುವ ಈ ಸಸ್ಯಗಳು ಅಂದದಷ್ಟೆ ಆರೋಗ್ಯಕ್ಕೂ ಉತ್ತಮ. ಅಂಥ ಕೆಲವು ಸಸ್ಯಗಳ ಬಗ್ಗೆ ತಿಳಿಯೋಣ.

## ಕ್ರಿಸೇಂಥಮಮ್ (ಸೇವಂತಿ ಜಾತಿಗೆ ಸೇರಿದ ಹೂವು)

1989ರಲ್ಲಿ ನಾಸಾ ಸಂಸ್ಥೆಯು ನಡೆಸಿದ ಅಧ್ಯಯನ ಪ್ರಕಾರ ಬಾಹ್ಯಾಕಾಶ ನಿಲ್ದಾಣದ ವಾತಾವರಣವನ್ನು ತಿಳಿಗೊಳಿಸಲು ಈ ಕ್ರಿಸೇಂಥಮಮ್ ಸಸ್ಯವು ಬಹಳ ಪ್ರಯೋಜನಕಾರಿ ಎಂದು ಹೇಳಲಾಯಿತು. ದ್ಯುತಿಸಂಶ್ಲೇಷಣೆ ಕ್ರಿಯೆಯಿಂದಾಗಿ ಕೆಲವು ಸಸ್ಯಗಳು ಗಾಳಿಯಲ್ಲಿರುವ ವಿಷಯುಕ್ತ ವಾಹಕಗಳಾದ ಬೆಂಜೀನ್, ಫಾರ್ಮಾಲ್ಡಿಹೈಡ್ ಮತ್ತು ಟ್ರೈಕ್ಲೋರೋ ಎಥಿಲಿನ್‌ಗಳನ್ನು ತೆಗೆಯುತ್ತವೆ. ಅದರಂತೆ ಕ್ರಿಸೇಂಥಮಮ್ ಸಸ್ಯವು ರಾಸಾಯಾನಿಕ ಹಾಗೂ ಅಮೋನಿಯಾದಂಥ ಅಂಶಗಳನ್ನು ತೆಗೆದುಹಾಕುತ್ತದೆ. ಜತೆಗೆ ವಾತಾವರಣಕ್ಕೆ ಹೊಸತನವನ್ನು ನೀಡುತ್ತದೆ. ಆದರೆ, ಇದರ

